ನೊಂ.ಸಂ. ಎ.ಆರ್. ಟಿ/.ಸಿ/ಎಂ.ಕೆ.ಟಿ/ಆರ್.ಜಿ.ಡಿ/7999/81–82
ನಂ. ಎ.ಆರ್.–32/ತಿದ್ದುಪಡಿ/21/1997–98
ಆಡಳಿತ ಕಛೇರಿ : ಆರ್.ಬಿ.ಐ. ಲೈಸೆನ್ಸ್ ನಂ. **UBD/KAN/1736P/13-7-99**
ಶಾಖೆ : ಆರ್.ಬಿ.ಐ. ಲೈಸೆನ್ಸ್ ನಂ. **UBD/BG/BL629/21-02-2013.**

ಸ್ಥಾಪನೆ : 06–10–1981

# ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿಯಮಿತ

ಆಡಳಿತ ಕಛೇರಿ: 8ನೇ ಮುಖ್ಯರಸ್ತೆ, ಅಶೋಕನಗರ, ತುಮಕೂರು –572103.
ದೂರವಾಣಿ: 2272615, 2955801, ಮಂಡಿಪೇಟೆ ಶಾಖೆ : 2955844
Email : parshwanathatumkur.2008@rediffmail.com spsbn@parshwanathabank.com
website : www.parshwanathabank.com

## ಮೇಲ್ಕಂಡ ಬ್ಯಾಂಕಿನ ಆಡಳಿತ ಮಂಡಲಿಗೆ ಚುನಾವಣಾ ದಿನಾಂಕದಿಂದ ಮುಂದಿನ ಐದು (05) ವರ್ಷಗಳ ಅವಧಿಗೆ ಆಡಳಿತ ಮಂಡಲಿ ನಿರ್ದೇಶಕರುಗಳ ಚುನಾವಣೆಗೆ ಚುನಾವಣಾ ನೋಟೀಸ್ ಮತ್ತು ಸೂಚನೆಗಳು

**ಚುನಾವಣಾ ದಿನಾಂಕ : 05–01–2025 ರಂದು ಭಾನುವಾರ**
ಸಮಯ : ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ
ಸ್ಥಳ : ಅತ್ತಿಮಬ್ಬೆ ವಿದ್ಯಾಮಂದಿರ, ಜಿನಮಂದಿರದ ಪಕ್ಕ, ಚಿಕ್ಕಪೇಟೆ, ತುಮಕೂರು.

ಅಂಚೆ ಪ್ರಮಾಣ ಪತ್ರ ಪಡೆದಿದೆ. ತೆರೆದ–ಅಂಚೆ.

ಶ್ರೀಮತಿ / ಶ್ರೀ

ಇಂದ :
ರಿಟರ್ನಿಂಗ್ ಅಧಿಕಾರಿಯವರಿಂದ
**ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿಯಮಿತ., ತುಮಕೂರು.**

ನಮೂನೆ XII
ನಿಯಮ 14(3)

## ಚುನಾವಣಾ ನೋಟೀಸು

ಸಹಕಾರ ಸಂಘಗಳ ಅಪರ ನಿಬಂಧಕರು, (ಕೈಗಾರಿಕೆ ಮತ್ತು ಹೈನುಗಾರಿಕೆ) ಹಾಗೂ ಚುನಾವಣಾಧಿಕಾರಿ ರವರ ಆದೇಶ ಸಂಖ್ಯೆ : ಅನಿ (ಕೈ&ಹೈ) / ಚುನಾವಣೆ /43/2024–25. ದಿನಾಂಕ : 24–10–2024 ರ ರೀತ್ಯಾ ರಿಟರ್ನಿಂಗ್ ಅಧಿಕಾರಿಯಾದ ನಾನು ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್, ನಿ, ತುಮಕೂರು ಇದರ ಆಡಳಿತ ಮಂಡಲಿಗೆ ಚುನಾವಣಾ ದಿನಾಂಕದಿಂದ ಮುಂದಿನ ಐದು (5) ವರ್ಷಗಳ ಅವಧಿಗೆ ಆಡಳಿತ ಮಂಡಲಿ ನಿರ್ದೇಶಕರನ್ನು ಚುನಾಯಿಸುವ ಸಲುವಾಗಿ ದಿನಾಂಕ: 05–01–2025 ರಂದು ಭಾನುವಾರ ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಅತ್ತಿಮಬ್ಬೆ ವಿದ್ಯಾ ಮಂದಿರ, ಜಿನ ಮಂದಿರದ ಪಕ್ಕ, ಚಿಕ್ಕಪೇಟೆ, ತುಮಕೂರು. ಇಲ್ಲಿ ಸಾಮಾನ್ಯ, ಕಾಯ್ದಿರಿಸಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗ (ಪ್ರವರ್ಗ ಎ ಮತ್ತು ಬಿ.) ಹಾಗೂ ಮಹಿಳಾ ಮೀಸಲು ಸ್ಥಾನಗಳಿಗೆ ಚುನಾವಣೆ ನಡೆಸಲಾಗುವುದೆಂದು ಸದರಿ ಚುನಾವಣಾ ವೇಳಾಪಟ್ಟಿಯು ಕೆಳಗಿನಂತೆ ಇರತಕ್ಕದೆಂದು ನೋಟೀಸ್ ನೀಡಲಾಗಿದೆ.

| ಕ್ರ ಸಂ. | ಚುನಾವಣಾ ಕಾರ್ಯಸೂಚಿ | ದಿನಾಂಕ ಮತ್ತು ಸಮಯ | ನಿಯಮಿಸಿದ ಅಧಿಕಾರಿ | ವಿವರ ಮತ್ತು ಸ್ಥಳ |
|---|---|---|---|---|
| 1. | ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಪ್ರಾರಂಭದ ದಿನಾಂಕ | 26–12–2024 ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ | ರಿಟರ್ನಿಂಗ್ ಆಫೀಸರ್ ರವರಿಗೆ / ಅವರಿಂದ ನೇಮಿಸಿದ ಅಧಿಕೃತ ಅಧಿಕಾರಿಗೆ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 2. | ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಕೊನೆಯ ದಿನಾಂಕ (ನಿಯಮ 14–ಎ) | 28–12–2024 ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ | ರಿಟರ್ನಿಂಗ್ ಆಫೀಸರ್ ರವರಿಗೆ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 3. | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ (ನಿಯಮ 14–ಬಿ) | 29–12–2024 ರಂದು ಬೆಳಿಗ್ಗೆ 11 ಗಂಟೆಗೆ | ರಿಟರ್ನಿಂಗ್ ಆಫೀಸರ್ ರವರಿಂದ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 4. | ಕ್ರಮಬದ್ಧವಾಗಿ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 14–ಬಿ (4) | 29–12–2024 ನಾಮಪತ್ರಗಳ ಪರಿಶೀಲನೆ ನಂತರ | ರಿಟರ್ನಿಂಗ್ ಆಫೀಸರ್ ರವರಿಂದ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 5. | ಉಮೇದುವಾರರಿಂದ ನಾಮಪತ್ರವನ್ನು ಲಿಖಿತವಾಗಿ ಹಿಂಪಡೆಯಲು ಕಡೆಯ ದಿನಾಂಕ (ನಿಯಮ 14–ಸಿ) | 30–12–2024 ಮಧ್ಯಾಹ್ನ 3.00 ಗಂಟೆಯ ಒಳಗೆ | ರಿಟರ್ನಿಂಗ್ ಆಫೀಸರ್ ರವರಿಗೆ / ಅವರಿಂದ ನೇಮಿಸಿದ ಅಧಿಕೃತ ಅಧಿಕಾರಿಗೆ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 6. | ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 14–ಡಿ) | 30–12–2024 ಮಧ್ಯಾಹ್ನ 3.00 ಗಂಟೆಯ ನಂತರ | ರಿಟರ್ನಿಂಗ್ ಆಫೀಸರ್ ರವರಿಂದ / ಅವರಿಂದ ನೇಮಿಸಿದ ಅಧಿಕೃತ ಅಧಿಕಾರಿಯವರಿಂದ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 7. | ಅವಶ್ಯಕವಿದ್ದಲ್ಲಿ ಅಭ್ಯರ್ಥಿಗಳಿಗೆ ಚಿಹ್ನೆಗಳ ಹಂಚಿಕೆ (ನಿಯಮ 14–ಇ) | 30–12–2024 ರಂದು ಊರ್ಜಿತ ಅಭ್ಯಥಿಗಳ ಪಟ್ಟಿ ಪ್ರಕಟಣೆ ನಂತರ | ರಿಟರ್ನಿಂಗ್ ಆಫೀಸರ್ ರವರಿಂದ / ಅವರಿಂದ ನೇಮಿಸಿದ ಅಧಿಕೃತ ಅಧಿಕಾರಿಯವರಿಂದ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 8. | ಕ್ರಮಬದ್ಧ ಉಮೇದುವಾರರ ಪಟ್ಟಿ ಚಿಹ್ನೆಯೊಂದಿಗೆ ಪ್ರಕಟಣೆ. (ನಿಯಮ 14–ಡಿ ಮತ್ತು 14–ಇ) | 31–12–2024 ಬೆಳಿಗ್ಗೆ 11–00 ಗಂಟೆಯ ನಂತರ | ರಿಟರ್ನಿಂಗ್ ಆಫೀಸರ್ ರವರಿಂದ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 9. | ಮತದಾನದ ದಿನಾಂಕ, ಸ್ಥಳ ಮತ್ತು ಸಮಯ | 05–01–2025 ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ | ರಿಟರ್ನಿಂಗ್ ಅಧಿಕಾರಿಯಿಂದ / ಅವರಿಂದ ನೇಮಕವಾದ ಚುನಾವಣಾ ಸಿಬ್ಬಂದಿಯವರಿಂದ | ಅತ್ತಿಮಬ್ಬೆ ವಿದ್ಯಾಮಂದಿರ, ಜಿನ ಮಂದಿರದ ಪಕ್ಕ, ಚಿಕ್ಕಪೇಟೆ, ತುಮಕೂರು |
| 10. | ಮತ ಎಣಿಕೆಯ ದಿನಾಂಕ ಮತ್ತು ಸಮಯ. | 05–01–2025 ಮತದಾನ ಮುಗಿದ ನಂತರ | ಚುನಾವಣಾ ಸಿಬ್ಬಂದಿಯವರಿಂದ | ಅತ್ತಿಮಬ್ಬೆ ವಿದ್ಯಾಮಂದಿರ, ಜಿನ ಮಂದಿರದ ಪಕ್ಕ, ಚಿಕ್ಕಪೇಟೆ, ತುಮಕೂರು |
| 11. | ರಿಟರ್ನಿಂಗ್ ಅಧಿಕಾರಿಯಿಂದ ಫಲಿತಾಂಶ ಘೋಷಣೆ | 05–01–2025 ಮತದಾನ ಮುಗಿದ ನಂತರ | ರಿಟರ್ನಿಂಗ್ ಆಫೀಸರ್ ರವರಿಂದ | ಚುನಾವಣೆ ನಡೆದ ಸ್ಥಳದಲ್ಲಿ ಮತ್ತು ಬ್ಯಾಂಕಿನ ಸೂಚನಾ ಫಲಕದಲ್ಲಿ. |

**ಸೂಚನೆಗಳು :–**

1. ಬ್ಯಾಂಕಿನ ಬೈಲಾ ರೀತ್ಯಾ ಆಡಳಿತ ಮಂಡಲಿಗೆ ಬೈಲಾ ಸಂಖ್ಯೆ 50 ರ ಪ್ರಕಾರ ಚುನಾವಣೆ ನಡೆಯುವ ಸ್ಥಾನಗಳು ಒಟ್ಟು 15 (ಹದಿನೈದು) ನಿರ್ದೇಶಕರ ಆಯ್ಕೆಗಾಗಿ ಚುನಾವಣೆ ನಡೆಯಲಿದ್ದು, ಇವುಗಳ ಪೈಕಿ 1 ಸ್ಥಾನ ಪರಿಶಿಷ್ಟ ಜಾತಿ, 1 ಸ್ಥಾನ ಪರಿಶಿಷ್ಟ ಪಂಗಡ, 1 ಸ್ಥಾನ ಹಿಂದುಳಿದ ವರ್ಗದ "ಎ", 1 ಸ್ಥಾನ ಹಿಂದುಳಿದ ವರ್ಗ "ಬಿ" ಮತ್ತು 2 ಸ್ಥಾನ ಮಹಿಳಾ ಸದಸ್ಯರಿಗೆ ಕಾಯ್ದಿರಿಸಿದೆ. ಉಳಿದಂತೆ 9 (ಒಂಬತ್ತು) ಸ್ಥಾನಗಳನ್ನು ಸಾಮಾನ್ಯ ವರ್ಗಕ್ಕೆ ಕಾಯ್ದಿರಿಸಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ಸ್ಥಾನಗಳಿಗೆ ಸ್ಪರ್ಧಿಸುವ ಸದಸ್ಯರು ಸಕ್ಷಮ ಪ್ರಾಧಿಕಾರದಿಂದ ಪಡೆದ ಇತ್ತೀಚಿನ ಜಾತಿ ಪ್ರಮಾಣಪತ್ರವನ್ನು ನಾಮಪತ್ರದೊಂದಿಗೆ ಲಗತ್ತಿಸುವುದು ಮತ್ತು ಸ್ಪರ್ಧಿಸುವ ಎಲ್ಲಾ ಉಮೇದುವಾರರು ತಮ್ಮ ಇತ್ತೀಚಿನ ಭಾವಚಿತ್ರವನ್ನು ನಾಮಪತ್ರದೊಂದಿಗೆ ಲಗತ್ತಿಸತಕ್ಕದ್ದು.
2. ಕರ್ನಾಟಕ ಸಹಕಾರ ಸಂಘಗಳ ನಿಯಮ 14 ಎ ರೀತ್ಯಾ ಉಮೇದುವಾರರು ಯಾವುದಾದರೂ ಒಂದು ಸ್ಥಾನಕ್ಕೆ ಮಾತ್ರ ಸ್ಪರ್ಧಿಸಬಹುದು. ಹಾಗೂ ನಾಮಪತ್ರಕ್ಕೆ ಅಂತಿಮ ಅರ್ಹ ಮತದಾರರ ಪಟ್ಟಿಯಲ್ಲಿರುವ ಒಬ್ಬ ಸದಸ್ಯ ಉಮೇದುವಾರರನ್ನು ಮಾತ್ರ ಸೂಚಿಸತಕ್ಕದ್ದು. (ಸೂಚಕರಾಗಿ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳನ್ನು ಸೂಚಿಸತಕ್ಕದ್ದಲ್ಲ)
3. ನಾಮಪತ್ರಗಳನ್ನು ಸಲ್ಲಿಸುವಾಗ ಚುನಾವಣಾ ಠೇವಣಿ ಬಾಬ್ತು ರೂ. 2000–00 ಗಳನ್ನು ಬ್ಯಾಂಕಿಗೆ ನಗದಾಗಿ ಪಾವತಿಸಿರುವ ರಸೀದಿ ಲಗತ್ತಿಸತಕ್ಕದ್ದು. ಮೀಸಲು ಸ್ಥಾನಗಳಿಗೆ ಸ್ಪರ್ಧಿಸುವ ಸದಸ್ಯರಿಗೆ ಶೇ 50 ರಷ್ಟು ವಿನಾಯಿತಿ ಇರುತ್ತದೆ.
4. ಕರ್ನಾಟಕ ಸಹಕಾರ ಸಂಘಗಳ ನಿಯಮ–14ಎಇ ರೀತ್ಯಾ ಹಾಗೂ ನಿಯಮ –14ಎಇ(4) ರೀತ್ಯಾ ಸ್ಪರ್ಧಿಸಿದ ಅಭ್ಯರ್ಥಿಯು ಚುನಾಯಿತನಾಗದಿದ್ದರೆ, ಚುನಾವಣೆಯಲ್ಲಿ ಎಲ್ಲಾ ಅಭ್ಯರ್ಥಿಗಳು ಪಡೆದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯನ್ನು ಚುನಾಯಿಸಬೇಕಾದ ಸದಸ್ಯರ ಸಂಖ್ಯೆಯಿಂದ ಭಾಗಿಸಿದಾಗ ಬರುವಷ್ಟರ ಸಂಖ್ಯೆಯ 1/6 ರಷ್ಟು ಕ್ರಮಬದ್ಧ ಮತಗಳನ್ನು ಪಡೆಯದಿದ್ದಲ್ಲಿ ಹಾಗೂ ಮೀಸಲು ಸ್ಥಾನಕ್ಕೆ ಸ್ಪರ್ಧಿಸಿರುವ ಅಭ್ಯರ್ಥಿಗಳು ಪಡೆದ ಕ್ರಮಬದ್ಧ ಮತಗಳ ಸಂಖ್ಯೆಯು ಚುನಾವಣೆಯಲ್ಲಿ ಮತದಾನವಾದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯ 1/10 ಕಡಿಮೆ ಇದ್ದಲ್ಲಿ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
5. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಪ್ರಕರಣ, ಮತ್ತು ನಿಯಮ ಹಾಗೂ ಬೈಲಾ ಪ್ರಕಾರ ಆಡಳಿತ ಮಂಡಲಿಗೆ ಆಯ್ಕೆಯಾಗಲು ಇರಬೇಕಾದ ಅರ್ಹತೆ/ ಅನರ್ಹತೆಗಳು ಈ ಕೆಳಕಂಡಂತೆ ಇರುತ್ತದೆ.
   ಅ) ಸಹಕಾರ ಕಾಯ್ದೆ ಕಲಂ 16 ಮತ್ತು 17 ರನ್ವಯ ಅನರ್ಹರಾಗಿ ಸಂಬಂಧಪಟ್ಟ ಪ್ರಾಧಿಕಾರದಿಂದ ಆದೇಶವಾಗಿದ್ದಲ್ಲಿ.
   ಆ) ಸಹಕಾರ ಕಾಯ್ದೆ ಕಲಂ 29 ಸಿ ರನ್ವಯ ಅನರ್ಹತೆ ಹೊಂದಿರತಕ್ಕದ್ದಲ್ಲ.
   ಇ) ಸಹಕಾರ ಬ್ಯಾಂಕಿನಲ್ಲಿ ಅಥವಾ ಇತರೆ ಸಹಕಾರ ಸಂಘದಲ್ಲಿ ಸುಸ್ತಿದಾರರಾಗಿರಕೂಡದು.
6. ನಾಮಪತ್ರಗಳ ಪರಿಶೀಲನೆ ವೇಳೆ ಅಭ್ಯರ್ಥಿಗಳು ಅಥವಾ ಸೂಚಕರು ಹಾಜರಿರಬಹುದು.
7. ಚುನಾವಣೆಗೆ ಸ್ಪರ್ಧಿಸಲು ಇಷ್ಟಪಡುವ ಸದಸ್ಯರು ನಾಮಪತ್ರದ ನಮೂನೆಗಳನ್ನು ಬ್ಯಾಂಕಿನ ಕೆಲಸದ ವೇಳೆಯಲ್ಲಿ ಚುನಾವಣಾಧಿಕಾರಿ/ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಂದ ಪಡೆಯಬಹುದು.
8. ಉಮೇದುವಾರಿಕೆ ನಾಮಪತ್ರಗಳನ್ನು ಹಾಗೂ ಅವುಗಳನ್ನು ವಾಪಸ್ಸು ಪಡೆಯುವ ಅರ್ಜಿಗಳನ್ನು ಚುನಾವಣಾಧಿಕಾರಿಗಳಿಗೆ ಉಮೇದುವಾರರೇ ಖುದ್ದಾಗಿ ಸಲ್ಲಿಸತಕ್ಕದ್ದು.
9. ಸದಸ್ಯರು ಯಾವುದಾದರೂ ಒಂದು ಸ್ಥಾನದಿಂದ ಮಾತ್ರ ಸ್ಪರ್ಧಿಸಲು ಅವಕಾಶವಿರುತ್ತದೆ.
10. 1960 ರ ಕರ್ನಾಟಕ ಸಹಕಾರ ಸಂಘಗಳ ನಿಯಮ –14 (ಇ)ರ ಪ್ರಕಾರ ಚುನಾವಣಾ ಅಧಿಕಾರಿಯವರು ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳಿಗೆ (ರಾಷ್ಟ್ರೀಯ ಪಕ್ಷಗಳ ಮತ್ತು ಕರ್ನಾಟಕ ರಾಜ್ಯದ ಪ್ರಾದೇಶಿಕ ಪಕ್ಷಗಳ ಚಿಹ್ನೆಗಳನ್ನು ಹೊರತುಪಡಿಸಿ) ಚುನಾವಣಾ ಚಿಹ್ನೆ ನೀಡಲು ಅಧಿಕಾರ ಹೊಂದಿರುತ್ತಾರೆ. ಚಿಹ್ನೆಯ ನೀಡುವುದರಲ್ಲಿ ಚುನಾವಣಾಧಿಕಾರಿಯವರದೇ ಅಂತಿಮ ತೀರ್ಮಾನ. ಮುಕ್ತ ಚುನಾವಣಾ ಚಿಹ್ನೆಗಳನ್ನು ಬ್ಯಾಂಕಿನ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸಲಾಗಿದೆ.
11. ಅಂತಿಮ / ಅರ್ಹ ಮತದಾರರ ಪಟ್ಟಿಯನ್ನು ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಿಂದ ನಿಗಧಿಪಡಿಸಿರುವ ಶುಲ್ಕವನ್ನು ಪಾವತಿಸಿ ಸದಸ್ಯರು ಪಡೆಯಬಹುದಾಗಿದೆ.
12. ಮತಚಲಾಯಿಸುವ ಅರ್ಹ ಸದಸ್ಯರು ಬ್ಯಾಂಕಿನಿಂದ ಪಡೆದ ಭಾವಚಿತ್ರವಿರುವ ಗುರುತಿನ ಕಾರ್ಡನ್ನು ಚುನಾವಣೆ ನಡೆಯುವ ಸ್ಥಳದಲ್ಲಿ ಹಾಜರುಪಡಿಸಬೇಕು. (ನಿಯಮ–13ಎ)
13. ಆಯ್ಕೆ ಮಾಡಬೇಕಾದ ಪ್ರತಿ ಸ್ಥಾನಗಳಿಗೆ ಅಗತ್ಯಕ್ಕಿಂತ ಹೆಚ್ಚಿನ ಅಭ್ಯರ್ಥಿಗಳಿದ್ದಲ್ಲಿ ಮಾತ್ರ ಚುನಾವಣೆ ನಡೆಸಲಾಗುವುದು.
14. ಚುನಾವಣೆ ಸಂಬಂಧವಾಗಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣೆ ಮುಗಿಯುವವರೆಗೂ ಸಾರ್ವಜನಿಕ ರಜಾ ದಿನಗಳಲ್ಲೂ ಚುನಾವಣಾ ಉದ್ದೇಶಕ್ಕೆ ಬ್ಯಾಂಕಿನ ಕಛೇರಿ ತೆರೆದಿರುತ್ತದೆ.

ಸ್ಥಳ: ತುಮಕೂರು.
ದಿನಾಂಕ : 16–12–2024

[Signature: B. R. Yashodhamma.]
(ಬಿ.ಆರ್. ಯಶೋಧಮ್ಮ)
ರಿಟರ್ನಿಂಗ್ ಅಧಿಕಾರಿ
ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿಯಮಿತ,
8ನೇ ಮುಖ್ಯರಸ್ತೆ, ಅಶೋಕನಗರ, ತುಮಕೂರು
ಹಾಗೂ ಅಧೀಕ್ಷಕರು (ನಿಯೋಜನೆ)
ಸಹಕಾರ ಸಂಘಗಳ ಸಹಾಯಕ ನಿಬಂಧಕರವರ ಕಛೇರಿ,
ತುಮಕೂರು ಉಪವಿಭಾಗ, ತುಮಕೂರು.